KARC210023732024

Presented on : 15-05-2024
Registered on : 15-05-2024
Decided on : 10-06-2026
Duration : 02 years, 00 months, 26 days

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
ದೇವದುರ್ಗ.

**ಉಪಸ್ಥಿತರು ಃ ಶ್ರೀ ರಫೀಕ್ ಅಹಮದ್., ಬಿಎ., ಎಲ್.ಎಲ್.ಬಿ.,**
**ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಕಾರಿಗಳು,**
ದೇವದುರ್ಗ.

**ಸಿ.ಸಿ.ನಂ ಃ 405/2024**

**ದಿನಾಂಕ 10 ನೇ ಜೂನ್- 2026.**

**ಪಿರ್ಯಾದಿದಾರರು** ಃ ರಾಜ್ಯ ಸರ್ಕಾರದ ಪರವಾಗಿ,
ಠಾಣಾಧಿಕಾರಿಗಳು
ದೇವದುರ್ಗ. ಪೊಲೀಸ್ ಠಾಣೆ, ದೇವದುರ್ಗ.

(ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿ ಃ ಅಮೆರೇಶ ನಾಯಕ ತಂದೆ ದುರುಗಯ್ಯ, 36 ವರ್ಷ,
ಉಃ ಕಂಟ್ರಕ್ಟರ್, ವಾಸಃ ಅಂಜಳ ಗ್ರಾಮ,
ತಾ: ದೇವದುರ್ಗ, ಜಿಃ ರಾಯಚೂರು.

(ಶ್ರೀ.ಎಸ್.ಪಿ., ವಕೀಲರು)

| | |
|---|---|
| **ಅಪರಾಧವು ಘಟಿಸಿದ ದಿನಾಂಕ** | ಃ 15-05-2024 |
| **2 ನೇಆರೋಪಿ ಹಾಜರಾತಿಯ ದಿನಾಂಕ** | ಃ 27-02-2025 |
| **ಫಿರ್ಯಾದುದಾರರ ಹೆಸರು** | ಃ ಶ್ರೀಮತಿ ಪುಷ್ಪಲತ |
| **ಸಾಕ್ಷಿ ವಿಚಾರಣೆಯನ್ನು ಪ್ರಾರಂಭಿಸಿದ ದಿನಾಂಕ** | ಃ 28-05-2025 |
| **ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿದ ದಿನಾಂಕ** | ಃ 29-04-2026 |
| **2 ನೇಆರೋಪಿ ವಿರುದ್ಧ ಹೊರಿಸಿದ ಆರೋಪಗಳು** | ಃ ಭಾ.ದಂ.ಸಂ ಕಲಂ 379, |

**ನ್ಯಾಯಾಲಯದ ತೀರ್ಮಾನ** : 2 ನೇ **ಆರೋಪಿ** ಬಿಡುಗಡೆಗೊಂಡಿರುತ್ತಾನೆ.

ಫಿರ್ಯಾದಿ ಪರ ಪ್ರತಿನಿಧಿಸಿದವರು : ಸರ್ಕಾರಿ ಅಭಿಯೋಜಕರು.

2 ನೇ ಆರೋಪಿತನ ಪರ ಪ್ರತಿನಿಧಿಸಿದವರು : ಶ್ರೀ.ಎಸ್.ಪಿ. ವಕೀಲರು.

***:: ತೀರ್ಪು ::***

ಠಾಣಾಧಿಕಾರಿಗಳು ದೇವದುರ್ಗ ಪೊಲೀಸ್ ಠಾಣೆ, ದೇವದುರ್ಗ ತಾಲ್ಲೂಕು ಇವರು 2 ನೇ ಆರೋಪಿತನ ವಿರುದ್ಧ ಭಾ.ದಂ.ಸಂ ಕಲಂ 379 ರ ರೀತ್ಯಾ ಅಪರಾಧ ಎಸಗಿರುತ್ತಾರೆಂದು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2.** **ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆ:-**

ದಿನಾಂಕ: 15-05-2024 ರಂದು ಮದ್ಯಾಹ್ನ 3-00 ಗಂಟೆಗೆ ಆರೋಪಿ ನಂ.1 ನೇದ್ದವನು ಕೃಷ್ಣಾ ನದಿಯಿಂದ ಅಕ್ರಮವಾಗಿ ಮರಳನ್ನು ಸಾಗಾಟ ಮಾಡಿ ಆರೋಪಿ ನಂ.2 ನೇದ್ದವರ ಮಾಲೀಕತ್ವದ ಗೋಪಾಳಪೂರ ಸೀಮಾಂತರದ ಜಮೀನು ಸರ್ವೆ ನಂ.35/2/2 ನೇದ್ದರಲ್ಲಿ ಅಕ್ರಮವಾಗಿ ಮರಳನ್ನು ದಾಸ್ತಾನು ಮಾಡಿದ್ದು, ಸಾಕ್ಷಿ ನಂ.1 ನೇದ್ದವರು ಪಂಚರಾದ ಸಾಕ್ಷಿ ನಂ.2 ಮತ್ತು 3 ನೇದವರಿಗೆ ಸದರಿ ವಿಷಯ ತಿಳಿಸಿ ಸಾಕ್ಷಿ ನಂ.1 ರಿಂದ ಸಾಕ್ಷಿ ನಂ.5 ರವರೆಗೆ ಎಲ್ಲರೂ ಸೇರಿಕೊಂಡು ದಾಳಿ ಮಾಡಿ, ಮುದ್ದೆ ಮಾಲನ್ನು ಜಪ್ತಿ ಮಾಡಿಕೊಂಡಿದ್ದು. ಚಾಸಾ.1 ರವರು ಲಿಖಿತ ದೂರನ್ನು ಸಲ್ಲಿಸಿದ್ದು, ಸದರಿ ದೂರಿನ ಆಧಾರದ ಮೇಲೆ ದೇವದುರ್ಗ ಪೊಲೀಸರು ತಮ್ಮ ಠಾಣಾ ಮೊ.ನಂ.150/2014 ರಲ್ಲಿ ಭಾ.ದಂ.ಸಂ ಕಲಂ 379 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖಾಧಿಕಾರಿಯು ತನಿಖೆ ಪೂರೈಸಿ 2 ನೇ ಆರೋಪಿತನ ವಿರುದ್ದ ಮೇಲ್ಕಂಡ ಕಲಂ ಗಳ ಅನ್ವಯ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ಅಭಿಯೋಜನಾ ಪಕ್ಷದವರು 2 ನೇ ಆರೋಪಿತನ ವಿರುದ್ದ ಸಲ್ಲಿಸಿರುವ ದೋಷಾರೋಪಣ ಪತ್ರ ಮತ್ತು ಅಭಿಯೋಜನೆಯ ದಾಖಲೆಗಳನ್ನು ಪರಿಶೀಲಿಸಿ ಭಾ.ದಂ.ಸಂ ಕಲಂ 379 ರಡಿಯಲ್ಲಿ ಎಸಗಿದ ಅಪರಾಧಗಳಿಗೆ ಸಂಜ್ಞೇಯತೆ ತೆಗೆದುಕೊಳ್ಳಲಾಯಿತು. ನ್ಯಾಯಾಲಯದ ಸಮನ್ಸ್ ನ ಅನ್ವಯ 2 ನೇ ಆರೋಪಿತನು ನ್ಯಾಯಾಲಯದ ಮುಂದೆ ಹಾಜರಾಗಿ ನ್ಯಾಯಾಲಯದ ಜಾಮೀನಿನ ಮೇಲೆ

ಬಿಡುಗಡೆ ಹೊಂದಿರುತ್ತಾರೆ. ದಂಡ ಪ್ರಕ್ರಿಯ ಸಂಹಿತೆಯ ಕಲಂ 207 ರಡಿಯಲ್ಲಿ 2 ನೇ ಆರೋಪಿತನಿಗೆ ಅಭಿಯೋಜನೆಯ ಕಾಗದ ಪತ್ರಗಳನ್ನು ನೀಡಲಾಯಿತು. 2 ನೇ ಆರೋಪಿತನಿಗೆ ಅವನ ಮೇಲಿನ ದೋಷಾರೋಪಣೆಗಳನ್ನು ರಚಿಸಿ ಓದಿ ಹೇಳಲಾಯಿತು. 2 ನೇ ಆರೋಪಿತನು ತಾನು ಏನು ತಪ್ಪು ಮಾಡಿಲ್ಲವೆಂದು ಹಾಗೂ ಪ್ರತಿರಕ್ಷೆ ಇದೆ ಎಂದು ಹೇಳಿ ವಿಚಾರಣೆ ಬಯಸಿರುತ್ತಾರೆ. ಆದ್ದರಿಂದ ಅಭಿಯೋಜನೆಗೆ 2 ನೇ ಆರೋಪಿತನ ವಿರುದ್ಧ ಹೊರಿಸಿದ ಅಪರಾಧಗಳನ್ನು ರುಜುವಾತು ಪಡಿಸಲು ಅವಕಾಶ ನೀಡಲಾಯಿತು.

**4.** ಅಭಿಯೋಜನೆಯು 2 ನೇ ಆರೋಪಿತನ ವಿರುದ್ಧ ಹೊರಿಸಿದ ಅಪರಾಧಗಳನ್ನು ರುಜುವಾತು ಪಡಿಸಲು ಒಟ್ಟು 6 ಜನ ಸಾಕ್ಷಿದಾರರಲ್ಲಿ ಪ್ರಾಸಾ.1 ರಿಂದ 6 ಎಂದು ಹಾಗೂ ನಿಪಿ.1 ರಿಂದ 7 ದಾಖಲೆಗಳನ್ನು ಹಾಗೂ ಸಿ.ಆರ್.ಪಿ.ಸಿ.ಕಲಂ 313 ರಲ್ಲಿ 2 ನೇ ಆರೋಪಿಯ ಹೇಳಿಕೆಗಳನ್ನು ದಾಖಲಿಸಲಾಯಿತು. ಸಾಕ್ಷಿದಾರರು 2 ನೇ ಆರೋಪಿಯ ವಿರುದ್ಧ ಹೇಳಿದ ಸಾಕ್ಷ್ಯವನ್ನು 2 ನೇ ಆರೋಪಿತನು ಅಲ್ಲಗೆಳೆದು ತನ್ನ ಪರ ಯಾವುದೇ ಸಾಕ್ಷಿ ವಿಚಾರಣೆ ಇರುವುದಿಲ್ಲ ಎಂದು ಹೇಳಿರುತ್ತಾರೆ.

**5.** ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ 2 ನೇ ಆರೋಪಿತನ ಪರವಾಗಿ ಶ್ರೀ.ಎಸ್.ಪಿ., ವಕೀಲರು ವಾದ ಕೇಳಿ ಕಡತದ ಪರಿಶೀಲನೆ ಮಾಡಲಾಗಿ ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಬಂದಿರುತ್ತವೆ.

## -:: ಅಂಶಗಳು ::-

**ಅಂಶ ನಂ.1** :- ಆರೋಪಿ ನಂ.1 ನೇದ್ದವನು ಕೃಷ್ಣಾ ನದಿಯಿಂದ ಅಕ್ರಮವಾಗಿ ಮರಳನ್ನು ಸಾಗಾಟ ಮಾಡಿ ಆರೋಪಿ ನಂ.02 ನೇದ್ದವರ ಮಾಲೀಕತ್ವದ ಗೋಪಾಳಪೂರ ಸೀಮಾಂತರದ ಜಮೀನು ಸರ್ವೆ ನಂಬರ್ 35/2/2 ನೇದ್ದರಲ್ಲಿ ಅಕ್ರಮವಾಗಿ ಮರಳನ್ನು ದಾಸ್ತಾನು ಮಾಡಿದ್ದು, ಸಾಕ್ಷಿ ನಂಬರ 1 ನೇದ್ದವರು ಪಂಚರಾದ ಸಾಕ್ಷಿ ನಂಬರ 02 ಮತ್ತು 03

ನೇದವರಿಗೆ ಸದರಿ ವಿಷಯ ತಿಳಿಸಿ ದಿನಾಂಕ: 15-05-2024 ರಂದು ಮದ್ಯಾಹ್ನ 3-00 ಗಂಟೆಗೆ ಸಾಕ್ಷಿ ನಂಬರ 1 ರಿಂದ ಸಾಕ್ಷಿ ನಂ.5 ರವರೆಗೆ ಎಲ್ಲರೂ ಸೇರಿಕೊಂಡು ಗೋಪಾಳಪೂರ ಸೀಮಾಂತರದ ಜಮೀನು ಸರ್ವೆ ನಂಬರ್ 35/2/2 ದಲ್ಲಿ ದಾಳಿ ಮಾಡಿ, ಮುದ್ದೆ ಮಾಲನ್ನು ಜಪ್ತಿ ಮಾಡಿಕೊಂಡಿದ್ದು ಇರುತ್ತದೆ. ಕೃಷ್ಣಾ ನದಿಯಿಂದ ಅಕ್ರಮವಾಗಿ ಮರಳನ್ನು ಕಳ್ಳತನದಿಂದ ಸಾಗಾಟ ಮಾಡಿ ಆರೋಪಿ ನಂಬರ್ 1 ನೇದ್ದವನು ಆರೋಪಿ ನಂ.2 ನೇದ್ದವನ ಸರ್ವೆ ನಂ.35/2/2 ರಲ್ಲಿ ದಾಸ್ತಾನು ಮಾಡಿದ್ದು. ಆ ಮೇರೆಗೆ ಭಾ.ದಂ.ಸಂ ಕಲಂ 379 ರಡಿಯಲ್ಲಿ ಆರೋಪಿತನು ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸಿರುವರೆ ?

**ಅಂಶ ನಂ 2** ಯಾವ ಆದೇಶ ?

**6.** ಮೇಲ್ಕಂಡ ಅಂಶಗಳನ್ನು ನಾನು ಈ ಕೆಳಕಂಡಂತೆ ಕಾಣಿಸಿರುವ ಕಾರಣಗಳಿಗಾಗಿ ಈ ರೀತಿ ಉತ್ತರಿಸುತ್ತೇನೆ.

**ಅಂಶ ನಂ 1** ಃ ನಕರಾತ್ಮಕವಾಗಿ

**ಅಂಶ ನಂ 2** ಃ ಅಂತಿಮ ಆದೇಶದ ಪ್ರಕಾರ ಈ ಕೆಳಕಂಡಂತೆ

***ಃಃ ಕಾರಣಗಳು ಃಃ***

**7. ಅಂಶ ನಂ.1** ಃ ಅಭಿಯೋಜನೆಯ ಪ್ರಕರಣದ ಸಾರಾಂಶವನ್ನು ಈ ತೀರ್ಪಿನ ಮೊದಲ ಹಂತದಲ್ಲೆ ನಮೂದಿಸಿದ್ದು ಮತ್ತೆ ಪುನರಾವರ್ತನೆಯನ್ನು ತಪ್ಪಿಸಲು ಈ ಹಂತದಲ್ಲಿ ನಮೂದಿಸಿರುವುದಿಲ್ಲ.

ಈ ಪ್ರಕರಣದಲ್ಲಿ ಮುಖ್ಯವಾಗಿ ಅಭಿಯೋಜನೆಯ ಈ ಕೆಳಕಂಡ ಘಟಕಾಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆ.

**ಕಲಂ 378 ರ ರೀತ್ಯಾ ಆರೋಪ ರುಜುವಾತಾಗಬೇಕಾದರೆ ಈ ಕೆಳಕಂಡ ಘಟಕಾಂಶಗಳನ್ನು ಸಂಪೂರ್ಣವಾಗಿ ರುಜುವಾತು ಪಡಿಸಬೇಕಾಗುತ್ತದೆ.**

ಯಾವುದೇ ವ್ಯಕ್ತಿಯ ಒಪ್ಪಿಗೆಯಿಲ್ಲದೆ ಅವನ ಸ್ವಾಧೀನದಿಂದ ಯಾವುದೇ ಚರ ಆಸ್ತಿಯನ್ನು ಅಪ್ರಾಮಾಣಿಕವಾಗಿ ತೆಗೆದುಕೊಳ್ಳಲು ಉದ್ದೇಶಿಸಿರುವ ಯಾರಾದರೂ, ಆ ಆಸ್ತಿಯನ್ನು ಹಾಗೆ

ತೆಗೆದುಕೊಳ್ಳಲು ಸ್ಥಳಾಂತರಿಸಿತ್ತಾರೆ ಎಂಬ ಅಂಶವನ್ನು ರುಜುವಾತು ಪಡಿಸತಕ್ಕದ್ದು.

**8.** ಅಭಿಯೋಜನೆಯು 2 ನೇ ಆರೋಪಿತನ ಮೇಲೆ ಹೊರಿಸಿದಂತಹ ಆರೋಪಗಳನ್ನು ರುಜುವಾತು ಪಡಿಸಲು ಪ್ರಕರಣದಲ್ಲಿ ದಾಳಿಯಲ್ಲಿಸಹಕರಿಸಿದ ಸಾಕ್ಷಿದಾರರಾದ ಚಾಸಾ-5 ವಿರೇಶ ಗ್ರಾಮ ಲೆಕ್ಕಾಧಿರಿಕಾಗಳು ರವರನ್ನು ಪ್ರಾಸಾ-1 ಎಂದು ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ:15-05-2024 ರಂದು ಮದ್ಯಾಹ್ನ 2-30 ಗಂಟೆಗೆ ಚಾಸಾ-1 ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರಿಗೆ ಗೋಪಾಳಪುರ ಗ್ರಾಮದ ಕೃಷ್ಣಾ ನದಿ ತೀರದಿಂದ ಅಕ್ರಮವಾಗಿ ಮರಳನ್ನು ಸಾಗಾಣಿಕೆ ಮಾಡಿ ಒಂದು ಹೊಲದಲ್ಲಿ ಸಂಗ್ರಹಿಸಿಟ್ಟಿದ್ದಾರೆಂದು ತಿಳಿಸಿದ್ದು, ಖಚಿತ ಮಾಹಿತಿ ಬಂದ ಮೇರೆಗೆ ತಮಗೆ ಸ್ಥಳಕ್ಕೆ ಹೋಗುವುದಾಗಿ ತಿಳಿಸಿದ್ದು. ತಮ್ಮ ಜೊತೆ ಸಿಬ್ಬಂದಿಯವರಾದ ಚಾಸಾ-4 ಹಾಗೂ ಪಂಚರಾದ ಚಾಸಾ-2 ಮತ್ತು 3 ಇವರ ಜೊತೆಗೆ ಸ್ಥಳಕ್ಕೆ ಹೋಗಿ ನೋಡಿದಾಗ, ಸ. ನಂ.35/2/2 ಇದಲ್ಲಿ ಮರಳು ಕುಪ್ಪೆ ಕುಪ್ಪೆ ಹಾಕಿರುವುದು ಕಂಡು ಬಂದಿದ್ದು. ಕಂದಾಯ ಅಧಕಾರಿಗಳು ಕುಂಪೆ ಹಾಕಿರುವ ಮರಳಿನ ಸರ್ವೆ ನಂಬರ್ ವಿಚಾರಿಸಲಾಗಿ ಸರ್ವೆ ನಂಬರ್ 35/2/2, ಜಮೀನು ಇದ್ದು, ಅದರ ಪಟ್ಟೆದಾರನ ಹೆಸರು ಶಿವಪ್ಪ ತಂದೆ ಡಾಕಪ್ಪ ಅಂತಾ ಗೊತ್ತಾಗಿದ್ದು. ಮರಳನ್ನು ಅಮರೇಶ ಎನ್ನುವವರು ಶೇಖರಣೆ ಮಾಡಿಟ್ಟಿರುತ್ತಾರೆಂದು ಚಾಸಾ-4 ರವರು ತಿಳಿಸಿದ್ದು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಅಳತೆ ಮಾಡಲಾಗಿ ಮರಳಿನ ಕುಪ್ಪೆ ಪ್ರಮಾಣ ಅಂದಾಜು 800 ಮೆಟ್ರಿಕ್ ಟನ್ ಇತ್ತು, ಮರಳು ಸಂಗ್ರಹಣೆ ಮಾಡಿದ ಪರವಾನಿಗೆ ಬಗ್ಗೆ ವಿಚಾರಣೆ ಮಾಡಲಾಗಿ ಇರುವುದಿಲ್ಲ ಎಂದು ಗೊತ್ತಾಯಿತು. ನಂತರ ಸ್ಥಳದಲ್ಲಿ ಚಾಸಾ-1 ರವರು ಪಂಚರ ಸಮಕ್ಷಮ ಮದ್ಯಾಹ್ನ 3-00 ರಿಂದ 3-30 ರವರೆಗೆ ಸ್ಥಳ ಪಂಚನಾಮೆಯನ್ನು ಮಾಡಿದ್ದು. ಜಮೀನಿನ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಚಾಸಾ-1 ರವರು ದೂರನ್ನು ಕೊಟ್ಟಿದ್ದು. ಈ ಬಗ್ಗೆ ತಾನು ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ಕೊಟ್ಟಿದ್ದು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿದಾರರು ಗುರುತಿಸಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**9.** ಪ್ರಾಸಾ.1 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಕಚೇರಿಗೆ ಆ ದಿನ ಬೆಳಿಗ್ಗೆ 9-30 ಗಂಟೆಗೆ ಹೋಗಿರುತ್ತೇನೆ. ನಾನು ದೇವದುರ್ಗ ಹೋಬಳಿಯ ಕೋಣಚಪ್ಪಳಿ ವೃತ್ತದಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತೇನೆ. ಮದ್ಯಾಹ್ನ 2-30 ಗಂಟೆ ಸುಮಾರಿಗೆ ನಮ್ಮ ಆರ್.ಐ ರವರು ಫೋನ್ ಮಾಡಿ ಮಾಹಿತಿ ತಿಳಿಸಿರುತ್ತಾರೆ. ಈ ಮೇಲೆ ಹೇಳಿದ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿರುವುದಿಲ್ಲ. ಜಾಲಹಳ್ಳಿ ಮುಖ್ಯ ರಸ್ತೆಯ ಮಾರ್ಗವಾಗಿ ಅಂಜಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಊರಿನ ಜನರು ಯಾರು ಸೇರಿರಲಿಲ್ಲ. ಚಾಸಾ-3 ಮತ್ತು 4 ರವರು ಸ್ಥಳವನ್ನು ತೋರಿಸಿರುತ್ತಾರೆ. ಸನಂ 35/2/2 ರಲ್ಲಿ ಮರಳನ್ನು ಶೇಖರಣೆ ಮಾಡಿಟ್ಟಿದ್ದನ್ನು ಯಾರು ಗುರುತಿಸಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-4 ರವರು ಗುರುತು ಹಿಡಿದಿರುತ್ತಾರೆ ಎನ್ನುತ್ತಾರೆ. ಸದರಿ ಭೂಮಿಯ ಪಟ್ಟೇದಾರನ ಹೆಸರು ಶಿವಪ್ಪ ತಂದೆ ಥಾಕಪ್ಪ ಅಂತಾ ಇರುತ್ತದೆ. ಆರೋಪಿಗೆ ಆ ಜಮೀನು ಸಂಬಂಧಿಸಿರುವುದಿಲ್ಲ. ಆರೋಪಿ ಮರಳನ್ನು ಜಮೀನನ್ನು ಶೇಖರಣೆ ಮಾಡಿಟ್ಟಿರುತ್ತಾರೆಂದು ನಾನು ನೋಡಿರುವುದಿಲ್ಲ ಚಾಸಾ-1 ರವರ ಮಾಹಿತಿ ತಿಳಿಸಿರುತ್ತಾರೆ. ಯಾವ ವಾಹನದಿಂದ ಮರಳನ್ನು ಜಮೀನನ್ಲಲಿ ಶೇಖರಣೆ ಮಾಡಿಟ್ಟಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ ಅಲ್ಲಿ ಯಾವುದೇ ವಾಹನ ಇರಲಿಲ್ಲ. ಮರಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿಯು ಹೊಳೆ ದಡದಲ್ಲಿ ಸಿಗುತ್ತದೆ ಎನ್ನುತ್ತಾರೆ. ಚಾಸಾ-4 ರವರು ಪಂಚನಾಮೆಯನ್ನು ಬರೆದಿರುತ್ತಾರೆ. ಪಂಚನಾಮೆ ಮಾಡಿದ ಜಾಗದ ಚಕ್ ಬಂದಿಯು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

**10.** ಪ್ರಕರಣದ ಫಿರ್ಯಾಧಿ ಸಾಕ್ಷಿದಾರರಾದ ಚಾಸಾ-1 ಶ್ರೀಮತಿ ಪುಷ್ಪಲತ ಎಸ್. ಕವಲೂರು ಪ್ರಾಸಾ-2 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 15-05-2024 ರಂದು ಮದ್ಯಾಹ್ನ 2-30 ಗಂಟೆಗೆ ತನಗೆ ಮಾನ್ಯ ಜಿಲ್ಲಾಧಿಕಾರಿಯವರ ಮೌಖಿಕ ಆದೇಶದ ಮೇರೆಗೆ ಗೋಪಾಳಪುರ ಗ್ರಾಮದ ಕೃಷ್ಣಾ ನದಿ ತೀರದಿಂದ ಅಕ್ರಮವಾಗಿ ಮರಳನ್ನು ಸಾಗಾಣಿಕೆ ಮಾಡಿ ಒಂದು ಹೊಲದಲ್ಲಿ ಸಂಗ್ರಹಿಸಿಟ್ಟಿದ್ದಾರೆಂದು ತಿಳಿಸಿದ್ದು, ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯವರಾದ ಚಾಸಾ-2 ರಿಂದ 5 ಸ್ಥಳಕ್ಕೆ ಹೋಗುವುದಾಗಿ

ತಿಳಿಸಿದ್ದು. ತಮ್ಮ ಜೊತೆ ಸಿಬ್ಬಂದಿಯವರಾದ ಚಾಸಾ-4 ಹಾಗೂ ಪಂಚರಾದ ಚಾಸಾ-2 ಮತ್ತು 3 ಇವರ ಜೊತೆಗೆ ಸರಕಾರಿ ಜೀಪ್ ನಂ.ಕೆ.ಎ-42, ಜಿ 601 ನೇದ್ದರಲ್ಲಿ ಕುಳಿತುಕೊಂಡು ಮದ್ಯಾಹ್ನ 2-30 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಿದಾಗ, ಗೋಪಾಳಪುರ ಗ್ರಾಮದ ಜಮೀನು ಸ. ನಂ.35/2/2 ಇದಲ್ಲಿ ಮರಳು ಕುಪ್ಪೆ ಕುಪ್ಪೆ ಹಾಕಿರುವುದು ಕಂಡು ಬಂದಿದ್ದು. ಕಂದಾಯ ಅಧಿಕಾರಿಗಳು ಕುಂಪೆ ಹಾಕಿರುವ ಮರಳಿನ ಸರ್ವೆ ನಂಬರ್ ವಿಚಾರಿಸಲಾಗಿ ಸರ್ವೆ ನಂಬರ್ 35/2/2, ಜಮೀನು ಇದ್ದು, ಅದರ ಪಟ್ಟೆದಾರನ ಹೆಸರು ಶಿವಪ್ಪ ತಂದೆ ಡಾಕಪ್ಪ ಅಂತಾ ಗೊತ್ತಾಗಿದ್ದು. ಮರಳನ್ನು ಅಮರೇಶ ತಂದೆ ದುರಗಯ್ಯ ಎನ್ನುವವರು ಶೇಖರಣೆ ಮಾಡಿಟ್ಟಿರುತ್ತಾರೆಂದು ಚಾಸಾ-4 ರವರು ತಿಳಿಸಿದ್ದು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಟೇಪ್ ನಿಂದ ಅಳತೆ ಮಾಡಲಾಗಿ ಮರಳಿನ ಕುಪ್ಪೆ ಪ್ರಮಾಣ ಅಂದಾಜು 800 ಮೆಟ್ರಿಕ್ ಟನ್ ಇತ್ತು, ಅದರ ಅಂದಾಜು ಕಿಮ್ಮತ್ತು ರೂ. 3,12,000/- ಮರಳು ಸಂಗ್ರಹಣೆ ಮಾಡಿದ ಪರವಾನಿಗೆ ಬಗ್ಗೆ ವಿಚಾರಣೆ ಮಾಡಲಾಗಿ ಇರುವುದಿಲ್ಲ ಎಂದು ಗೊತ್ತಾಯಿತು. ನಂತರ ಸ್ಥಳದಲ್ಲಿ ತಾನು ಪಂಚರ ಸಮಕ್ಷಮ ಮದ್ಯಾಹ್ನ 3-00 ರಿಂದ 3-30 ರವರೆಗೆ ಸ್ಥಳ ಪಂಚನಾಮೆಯನ್ನು ಮಾಡಿದ್ದು. ಜಮೀನಿನ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಾನು ದೂರನ್ನು ಕೊಟ್ಟಿದ್ದು. ಸ್ಥಳದಲ್ಲಿ ಜನರು ಇಲ್ಲದೆ ಇರುವ ಕಾರಣ ತಮ್ಮ ಇಲಾಖೆಯ ಸಿಬ್ಬಂದಿಯವರನ್ನು ಪಂಚರನ್ನಾಗಿ ಮಾಡಿದ್ದು. ಸದರಿ ಪಂಚನಾಮೆಗೆ ಪಂಚ ಸಾಕ್ಷಿದಾರರಾದ ಶಿವಪ್ಪ ತಂದೆ ಭೀಮಣ್ಣ ವಗಡಂಬಳಿ, ಭೀಮಣ್ಣ ತಂದೆ ಸಿದ್ದಪ್ಪ ಇವರು ಸಹಿ ಮಾಡಿರುವುದಾಗಿ ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**11.** ಪ್ರಾಸಾ.2 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರ ಮೌಖಿಕ ಆದೇಶದ ಮೇರೆಗೆ ರಾಯಚೂರಿನಿಂದ ನನ್ನ ಜೊತೆ ಒಬ್ಬ ಸಿಬ್ಬಂದಿ ಬಂದಿರುತ್ತಾರೆ. ದೇವದುರ್ಗದಲ್ಲಿ ತಹಶೀಲ್ದಾರ ಕಚೇರಿಗೆ ಬಂದಿರುತ್ತೇನೆ. ಪಂಚರನ್ನು ನಾನೆ ತಹಶೀಲ್ದಾರ ಮುಖೇನ ಬರಮಾಡಿಕೊಂಡಿರುತ್ತೇನೆ. ಅಲ್ಲಿಂದ ನಾನು ನಮ್ಮ ಸಿಬ್ಬಂದಿ ಮತ್ತು ಪಂಚರು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಮರಳು ಕುಪ್ಪೆಯಾಗಿ ಶೇಖರಣೆ ಮಾಡಿಟ್ಟಿರುವುದು ಕಂಡು ಬಂದಿರುತ್ತದೆ. ಅಂದಾಜು ಮರಳಿನ 03 ಕುಪ್ಪೆಗಳು ಇದ್ದವು.

ತಹಶೀಲ್ದಾರ ಕಚೇರಿಯಿಂದ ಗೋಪಾಳಪುರ ಗ್ರಾಮ ಸುಮಾರು 12 ಕಿ ಮಿ ದೂರ ಆಗುತ್ತದೆ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಗುನ್ಹೆ ಸ್ಥಳ ಊರಿನ ಸಮೀಪದಲ್ಲಿರುತ್ತದೆ. ನಾವು ಹೋದಾಗ ಅಲ್ಲಿ ಜನರು ಸೇರಿದ್ದರು ಆದರೆ ನಮ್ಮನ್ನು ನೋಡಿ ಬರಲು ನಿರಕಾರಿಸಿರುತ್ತಾರೆ. ಗುನ್ಹೆ ಸ್ಥಳದಲ್ಲಿ ಸಾರ್ವ ಜನಿಕರನ್ನು ವಿಚಾರಣೆ ಮಾಡಲು ಪ್ರಯತ್ನ ಮಾಡಿರುತ್ತೇವೆ ಅವರು ನಮ್ಮನ್ನು ನೋಡಿ ಬರಲು ನಿರಾಕರಿಸಿರುತ್ತಾರೆ. ಮರಳಿನ ಯಾವ ಕುಪ್ಪೆ ಎಷ್ಟು ಮೆಟ್ರಿಕ್ ಟನ್ ಇತ್ತು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ಚಾಸಾ-4 ರವರು ಬರೆದಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ನಮ್ಮ ಇಲಾಖೆಯ ಅಧಿಕಾರಿಗಳು ಇದ್ದರು ಸಾರ್ವ ಜನಿಕರು ದೂರದಲ್ಲಿದ್ದರು ಸ್ಥಳಕ್ಕೆ ಬಂದಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚಕ್ ಬಂದಿ ಪೂರ್ವ ದಿಕ್ಕಿಗೆ ಸ ನಂ 30, ಪಶ್ಚಿಮ ದಿಕ್ಕಿಗೆ ಸ.ನಂ.36/2/2, ಉತ್ತರ ಕ್ಕೆ- ಸ.ನಂ.35/1, ದಕ್ಷಿಣ ದಿಕ್ಕಿಗೆ ಸ.ನಂ.35/5 ಇರುತ್ತದೆ. ಮರಳನ್ನು ಶೇಖರಿಸಿಟ್ಟಿದ್ದ ಜಮೀನು ಸ ನಂ ನ್ನು ಚಾಸಾ-4 ರವರು ಗುರುತು ಮಾಡಿರುತ್ತಾರೆ ನಾನು ಭೂಮಿ ಸಾಪ್ಟವೇರ ಸಹಾಯದಿಂದ ಜಮೀನು ಸರ್ವೆ ನಂಬರ್ ನ್ನು ಗುರುತು ಮಾಡಿರುತ್ತೇನೆ. ಈ ರೀತಿ ನನ್ನ ಫಿರ್ಯಾದಿಯಲ್ಲಿ ನಮೂದು ಮಾಡಿರುವುದಿಲ್ಲ. ಪರವಾನಿಗೆ ಹೊಂದಿದವರು ಮರಳನ್ನು ಶೇಖರಿಸಿ ಇಡಬಹುದು ಎಂದರೆ ಸಾಕ್ಷಿಯು ಸರಿ ಎನ್ನುತ್ತಾರೆ. ಯಾವ ವಾಹನದ ಸಹಾಯದಿಂದ ಮರಳನ್ನು ಸಂಗ್ರಹಿಸಿಟ್ಟಿದ್ದಾರೆಂದು ನನಗೆ ಮಾಹಿತಿ ಇಲ್ಲ ಆದರೆ 2 ನೇ ಆರೋಪಿ ಮರಳನ್ನು ಸಂಗ್ರಹಿಸಿಟ್ಟಿರುವುದು ಚಾಸಾ-4 ಮತ್ತು ಅಲ್ಲಿದ್ದ ಜನರು ಮಾಹಿತಿಯನ್ನು ತಿಳಿಸಿರುತ್ತಾರೆ. ಚಾಸಾ-4 ರವರ ಮಾಹಿತಿ ಮೇರೆಗೆ ನಾನು ದೂರನ್ನು ಕೊಟ್ಟಿರುತ್ತೇನೆ. ಮರಳು ಸಂಗ್ರಹಿಸಿಟ್ಟಿದ್ದವರ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

**12.** ಪ್ರಕರಣದ ದಾಳಿಕಾಲಕ್ಕೆ ಸಹಕರಿಸಿದ ಪಂಚಸಾಕ್ಷಿದಾರರಾದ ಚಾಸಾ-2 ಶ್ರೀಮತಿ ನಂದಿನಿ ರವರನ್ನು ಪ್ರಾಸಾ-3 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 15-05-2024 ರಂದು ಮದ್ಯಾಹ್ನ 2-30 ಗಂಟೆಗೆ ತನಗೆ ಮಾನ್ಯ ಜಿಲ್ಲಾಧಿಕಾರಿಯವರ ಮೌಖಿಕ ಆದೇಶದ ಮೇರೆಗೆ ಗೋಪಾಳಪುರ ಗ್ರಾಮದ ಕೃಷ್ಣಾ ನದಿ ತೀರದಿಂದ

ಅಕ್ರಮವಾಗಿ ಮರಳನ್ನು ಸಾಗಾಣಿಕೆ ಮಾಡಿ ಒಂದು ಹೊಲದಲ್ಲಿ ಸಂಗ್ರಹಿಸಿಟ್ಟಿದ್ದಾರೆಂದು ತಿಳಿಸಿದ್ದು, ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯವರಾದ ಚಾಸಾ-2 ರಿಂದ 5 ಸ್ಥಳಕ್ಕೆ ಹೋಗುವುದಾಗಿ ತಿಳಿಸಿದ್ದು. ತಮ್ಮ ಜೊತೆ ಸಿಬ್ಬಂದಿಯವರಾದ ಚಾಸಾ-4 ಹಾಗೂ ಪಂಚರಾದ ಚಾಸಾ-2 ಮತ್ತು 3 ಇವರ ಜೊತೆಗೆ ಸರಕಾರಿ ಜೀಪ್ ನಂಬರ್ ಕೆ.ಎ-42, ಜಿ-601 ನೇದ್ದರಲ್ಲಿ ಕುಳಿತುಕೊಂಡು ಮದ್ಯಾಹ್ನ 2-30 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಿದಾಗ, ಗೋಪಾಳಪುರ ಗ್ರಾಮದ ಜಮೀನು ಸ.ನಂ.35/2/2 ಇದರಲ್ಲಿ ಮರಳು ಕುಪ್ಪೆ ಕುಪ್ಪೆ ಹಾಕಿರುವುದು ಕಂಡು ಬಂದಿದ್ದು. ಕಂದಾಯ ಅಧಿಕಾರಿಗಳು ಕುಂಪೆ ಹಾಕಿರುವ ಮರಳಿನ ಸರ್ವೆ ನಂಬರ್ ವಿಚಾರಿಸಲಾಗಿ ಸರ್ವೆ ನಂಬರ್ 35/2/2, ಜಮೀನು ಇದ್ದು, ಅದರ ಪಟ್ಟೆದಾರನ ಹೆಸರು ಶಿವಪ್ಪ ತಂದೆ ಡಾಕಪ್ಪ ಅಂತಾ ಗೊತ್ತಾಗಿದ್ದು. ಮರಳನ್ನು ಅಮರೇಶ ತಂದೆ ದುರಗಯ್ಯ ಎನ್ನುವವರು ಶೇಖರಣೆ ಮಾಡಿಟ್ಟಿರುತ್ತಾರೆಂದು ಚಾಸಾ-4 ರವರು ತಿಳಿಸಿದ್ದು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಟೇಪ್ ನಿಂದ ಅಳತೆ ಮಾಡಲಾಗಿ ಮರಳಿನ ಕುಪ್ಪೆ ಪ್ರಮಾಣ ಅಂದಾಜು 800 ಮೆಟ್ರಿಕ್ ಟನ್ ಇತ್ತು, ಅದರ ಅಂದಾಜು ಕಿಮ್ಮತ್ತು ರೂ.312000/- ಮರಳು ಸಂಗ್ರಹಣೆ ಮಾಡಿದ ಪರವಾನಿಗೆ ಬಗ್ಗೆ ವಿಚಾರಣೆ ಮಾಡಲಾಗಿ ಇರುವುದಿಲ್ಲ ಎಂದು ಗೊತ್ತಾಯಿತು. ನಂತರ ಸ್ಥಳದಲ್ಲಿ ತಾನು ಪಂಚರ ಸಮಕ್ಷಮ ಮದ್ಯಾಹ್ನ 3-00 ರಿಂದ 3-30 ರವರೆಗೆ ಸ್ಥಳ ಪಂಚನಾಮೆಯನ್ನು ಮಾಡಿದ್ದು. ಜಮೀನಿನ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಾನು ದೂರನ್ನು ಕೊಟ್ಟಿದ್ದು. ಸ್ಥಳದಲ್ಲಿ ಜನರು ಇಲ್ಲದೆ ಇರುವ ಕಾರಣ ತಮ್ಮ ಇಲಾಖೆಯ ಸಿಬ್ಬಂದಿಯವರನ್ನು ಪಂಚರನ್ನಾಗಿ ಮಾಡಿದ್ದು. ಸದರಿ ಪಂಚನಾಮೆಗೆ ಪಂಚ ಸಾಕ್ಷಿದಾರರಾದ ಶಿವಪ್ಪ ತಂದೆ ಭೀಮಣ್ಣ ವಗಡಂಬಳಿ, ಭೀಮಣ್ಣ ತಂದೆ ಸಿದ್ದಪ್ಪ ಇವರು ಸಹಿ ಮಾಡಿರುವುದಾಗಿ ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**13.** ಪ್ರಾಸಾ.3 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರ ಮೌಖಿಕ ಆದೇಶದ ಮೇರೆಗೆ ರಾಯಚೂರಿನಿಂದ ನನ್ನ ಜೊತೆ ಒಬ್ಬ ಸಿಬ್ಬಂದಿ ಬಂದಿರುತ್ತಾರೆ. ದೇವದುರ್ಗದಲ್ಲಿ ತಹಶೀಲ್ದಾರ ಕಚೇರಿಗೆ ಬಂದಿರುತ್ತೇನೆ. ಪಂಚರನ್ನು

ನಾನೆ ತಹಶೀಲ್ದಾರ ಮುಖೇನ ಬರಮಾಡಿಕೊಂಡಿರುತ್ತೇನೆ. ಅಲ್ಲಿಂದ ನಾನು ನಮ್ಮ ಸಿಬ್ಬಂದಿ ಮತ್ತು ಪಂಚರು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಮರಳು ಕುಪ್ಪೆಯಾಗಿ ಶೇಖರಣೆ ಮಾಡಿಟ್ಟಿರುವುದು ಕಂಡು ಬಂದಿರುತ್ತದೆ. ಅಂದಾಜು ಮರಳಿನ 03 ಕುಪ್ಪೆಗಳು ಇದ್ದವು. ತಹಶೀಲ್ದಾರ ಕಚೇರಿಯಿಂದ ಗೋಪಾಳಪುರ ಗ್ರಾಮ ಸುಮಾರು 12 ಕಿ ಮಿ ದೂರ ಆಗುತ್ತದೆ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಗುನ್ನೆ ಸ್ಥಳ ಊರಿನ ಸಮೀಪದಲ್ಲಿರುತ್ತದೆ. ನಾವು ಹೋದಾಗ ಅಲ್ಲಿ ಜನರು ಸೇರಿದ್ದರು ಆದರೆ ನಮ್ಮನ್ನು ನೋಡಿ ಬರಲು ನಿರಕಾರಿಸಿರುತ್ತಾರೆ. ಗುನ್ನೆ ಸ್ಥಳದಲ್ಲಿ ಸಾರ್ವ ಜನಿಕರನ್ನು ವಿಚಾರಣೆ ಮಾಡಲು ಪ್ರಯತ್ನ ಮಾಡಿರುತ್ತೇವೆ ಅವರು ನಮ್ಮನ್ನು ನೋಡಿ ಬರಲು ನಿರಾಕರಿಸಿರುತ್ತಾರೆ. ಮರಳಿನ ಯಾವ ಕುಪ್ಪೆ ಎಷ್ಟು ಮೆಟ್ರಿಕ್ ಟನ್ ಇತ್ತು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ಚಾಸಾ-4 ರವರು ಬರೆದಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ನಮ್ಮ ಇಲಾಖೆಯ ಅಧಿಕಾರಿಗಳು ಇದ್ದರು ಸಾರ್ವ ಜನಿಕರು ದೂರದಲ್ಲಿದ್ದರು ಸ್ಥಳಕ್ಕೆ ಬಂದಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚಕ್ ಬಂದಿ ಪೂರ್ವ ದಿಕ್ಕಿಗೆ ಸ ನಂ 30, ಪಶ್ಚಿಮ ದಿಕ್ಕಿಗೆ ಸ ನಂ 36/2/2, ಉತ್ತರ ಕ್ಕೆ- ಸ ನಂ 35/1, ದಕ್ಷಿಣ ದಿಕ್ಕಿಗೆ ಸ ನಂ 35/5 ಇರುತ್ತದೆ. ಮರಳನ್ನು ಶೇಖರಿಸಿಟ್ಟಿದ್ದ ಜಮೀನು ಸ ನಂ ನ್ನು ಚಾಸಾ-4 ರವರು ಗುರುತು ಮಾಡಿರುತ್ತಾರೆ ನಾನು ಭೂಮಿ ಸಾಪ್ಟವೇರ ಸಹಾಯದಿಂದ ಜಮೀನು ಸರ್ವೆ ನಂಬರ್ ನ್ನು ಗುರುತು ಮಾಡಿರುತ್ತೇನೆ. ಈ ರೀತಿ ನನ್ನ ಫಿರ್ಯಾದಿಯಲ್ಲಿ ನಮೂದು ಮಾಡಿರುವುದಿಲ್ಲ. ಪಂಚನಾಮೆ ಮಾಡಿದ ನಂತರ ಸಂಜೆ 6-30 ಗಂಟೆಗೆ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ ಆ ಸಮಯದಲ್ಲಿ ನಮ್ಮ ಸಿಬ್ಬಂದಿಯವರು ನಮ್ಮ ಜೊತೆಗೆ ಇದ್ದರು. ಪಂಚನಾಮೆ ಮಾಡಿದ ನಂತರ ನಾನು ಮತ್ತು ಸಿಬ್ಬಂದಿಯವರಾದ ಚಾಸಾ-2 ರಿಂದ 5 ರವರು ವಾಪಸ್ಸು ಬಂದಿರುತ್ತೇವೆ. ಯಾವ ವಾಹನದ ಸಹಾಯದಿಂದ ಮರಳನ್ನು ಸಂಗ್ರಹಿಸಿಟ್ಟಿದ್ದಾರೆಂದು ನನಗೆ ಮಾಹಿತಿ ಇಲ್ಲ ಆದರೆ 2 ನೇ ಆರೋಪಿ ಮರಳನ್ನು ಸಂಗ್ರಹಿಸಿಟ್ಟಿರುವುದು ಚಾಸಾ-4 ಮತ್ತು ಅಲ್ಲಿದ್ದ ಜನರು ಮಾಹಿತಿಯನ್ನು ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ.

**14.** ಪ್ರಕರಣದಲ್ಲಿ ದಾಳಿಕಾಲಕ್ಕೆ ಪಂಚಸಾಕ್ಷಿದಾರರಾದ ಚಾಸಾ-2 ಶಿವಪ್ಪ ಗ್ರಾಮ ಸಹಾಯಕ ರವರನ್ನು ಪ್ರಾಸಾ-4 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ಪರಿಚಯ ಇಲ್ಲ. ಸಾಕ್ಷಿಯು ಮರಳಿನ ದಾಳಿ ಮತ್ತು ದಾಸ್ತಾನು ಪಂಚನಾಮೆಯನ್ನು ನೋಡಿ ಗುರುತಿಸಿದ್ದು. ಸದರಿ ಸಹಿಯನ್ನು ಸುಮಾರು 2 ವರ್ಷದ ಹಿಂದೆ ಚಾಸಾ-1, 3 ರಿಂದ 5 ರವರು ಸ್ಥಳಕ್ಕೆ ಹೋಗುವುದಾಗಿ ತಿಳಿಸಿದ್ದು, ಅವರ ಜೊತೆ ಸ್ಥಳಕ್ಕೆ ಹೋಗಿದ್ದು. ಸ್ಥಳಕ್ಕೆ ಹೋಗಿ ನೋಡಿದಾಗ, ಗೋಪಾಳಪುರ ಗ್ರಾಮದ ಜಮೀನು ಸ.ನಂ.35 ಇದರಲ್ಲಿ ಮರಳು ಕುಪ್ಪೆ ಕುಪ್ಪೆ ಹಾಕಿರುವುದು ಕಂಡು ಬಂದಿದ್ದು. ಕಂದಾಯ ಅಧಿಕಾರಿಗಳು ಕುಂಪೆ ಹಾಕಿರುವ ಮರಳಿನ ಸರ್ವೆ ನಂಬರ್ ವಿಚಾರಿಸಲಾಗಿ ಸರ್ವೆ ನಂಬರ್ 35/2/2, ಜಮೀನು ಇದ್ದು, ಅದರ ಪಟ್ಟೆದಾರನ ಹೆಸರು ಶಿವಪ್ಪ ತಂದೆ ಡಾಕಪ್ಪ ಅಂತಾ ಗೊತ್ತಾಗಿದ್ದು. ಮರಳನ್ನು ಅಮರೇಶ ತಂದೆ ದುರಗಯ್ಯ ಎನ್ನುವವರು ಶೇಖರಣೆ ಮಾಡಿಟ್ಟಿದ್ದು, ಚಾಸಾ-4 ರವರು ತಿಳಿಸಿದ್ದು. ನಂತರ ಸ್ಥಳದಲ್ಲಿ ತಾನು ಪಂಚರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಭಾಗಶಃ ಸಾಕ್ಷ್ಯ ನುಡಿದಿರುತ್ತಾರೆ.

**15.** ಪ್ರಾಸಾ.4 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ನನಗೆ ಓದಲು ಬರೆಯಲು ಬರುವುದಿಲ್ಲ. ಚಾಸಾ-1, 4 ರಿಂದ 6 ನಿಮ್ಮ ಮೇಲಾಧಿಕಾರಿಗಳಾಗಿರುತ್ತಾರೆ ಅವರು ಹೇಳಿದಂತೆ ನೀವು ಕೆಲಸ ಮಾಡಬೇಕಾಗುತ್ತದೆ ಎಂದರೆ ಸರಿ. ಪಂಚನಾಮೆಯಲ್ಲಿ ಏನೂ ಬರೆದಿದ್ದಾರೆಂದು ಗೊತ್ತಿಲ್ಲ ಅದಕ್ಕೆ ಸಹಿ ಮಾಡು ಎಂದ ಕಾರಣಕ್ಕೆ ಸಹಿ ಮಾಡಿದ್ದೀರಿ ಎಂದರೆ ಸರಿ. ದೇವದುರ್ಗದಿಂದ ಗೋಪಾಳಪುರ ಯಾವ ದಿಕ್ಕಿಗೆ ಬರುತ್ತದೆಂದು ನನಗೆ ಗೊತ್ತಿಲ್ಲ. ನಾನು ವಗಡಂಬಳಿಯಲ್ಲಿದ್ದೆ ಚಾಸಾ-4 ರವರು ದೂರುವಾಣಿ ಕರೆ ಮಾಡಿ ನನಗೆ ಕರೆದಿರುತ್ತಾರೆ. ಗುನ್ಹೆ ಸ್ಥಳದ ಚಕ್‌ಬಂದಿ ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಚಾಸಾ-1 ರಿಂದ 4 ಇವರನ್ನು ಹೊರತುಪಡಿಸಿ ಊರಿನವರು ಯಾರು ಇರಲಿಲ್ಲ. ಆರೋಪಿತನು ಮರಳನ್ನು ಸ್ಥಳದಲ್ಲಿ ಶೇಖರಣೆ ಮಾಡಿಟ್ಟಿರುವುದು ನಾನು ಕಣ್ಣಾರೆ ನೋಡಿರುವುದಿಲ್ಲ ಆದರೆ ಅಧಿಕಾರಿಗಳು ತಿಳಿಸಿರುತ್ತಾರೆ. ಆರೋಪಿತನು ಯಾವ ವಾಹನದಿಂದ

ಮರಳನ್ನು ಶೇಖರಣ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಟ್ರ್ಯಾಕ್ಟರ್ ನಿಂದ ಮಾಡಿದ್ದಾನೆ ಎಂದು ಹೇಳುತ್ತಾನೆ. ಆ ಟ್ರ್ಯಾಕ್ಟರ್ ಯಾರದು ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

**16.** ಪ್ರಕರಣದ ದಾಳಿ ಕಾಲದ ಪಂಚ ಸಾಕ್ಷಿದಾರರು ಚಾಸಾ-3 ಭೂಮಣ್ಣ ಗ್ರಾಮಲೆಕ್ಕಾಧಿಕಾರಿ ರವರನ್ನು ಪ್ರಾಸಾ-5 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 15-05-2024 ರಂದು ಮದ್ಯಾಹ್ನ 2-30 ಗಂಟೆಗೆ ಚಾಸಾ-1 ರವರಿಗೆ ಮಾನ್ಯ ಜಿಲ್ಲಾಧಿಕಾರಿಯವರ ಮೌಖಿಕ ಆದೇಶದ ಮೇರೆಗೆ ಗೋಪಾಳಪುರ ಗ್ರಾಮದ ಕೃಷ್ಣಾ ನದಿ ತೀರದಿಂದ ಅಕ್ರಮವಾಗಿ ಮರಳನ್ನು ಸಾಗಾಣಿಕೆ ಮಾಡಿ ಒಂದು ಹೊಲದಲ್ಲಿ ಸಂಗ್ರಹಿಸಿಟ್ಟಿದ್ದಾರೆಂದು ತಿಳಿಸಿದ್ದು, ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯವರಾದ ತನಗೆ, ಚಾಸಾ-2 ರಿಂದ 5 ಸ್ಥಳಕ್ಕೆ ಹೋಗುವುದಾಗಿ ತಿಳಿಸಿದ್ದು. ತಮ್ಮ ಜೊತೆ ಸಿಬ್ಬಂದಿಯವರಾದ ಚಾಸಾ-4 ಹಾಗೂ ಪಂಚರಾದ ಚಾಸಾ-2 ಮತ್ತು ಒಬ್ಬ ಪೋಲಿಸ್ ಇವರ ಜೊತೆಗೆ ಮದ್ಯಾಹ್ನ 2-30 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಿದಾಗ, ಗೋಪಾಳಪುರ ಗ್ರಾಮದ ಜಮೀನು ಸ.ನಂ.35/2/2 ಇದಲ್ಲಿ ಮರಳು ಕುಪ್ಪೆ ಕುಪ್ಪೆ ಹಾಕಿರುವುದು ಕಂಡು ಬಂದಿದ್ದು. ಕಂದಾಯ ಅಧಿಕಾರಿಗಳು ಕುಂಪೆ ಹಾಕಿರುವ ಮರಳಿನ ಸರ್ವೆ ನಂಬರ್ ವಿಚಾರಿಸಲಾಗಿ ಸರ್ವೆ ನಂಬರ್ 35/2/2, ಜಮೀನು ಇದ್ದು, ಅದರ ಪಟ್ಟೆದಾರನ ಹೆಸರು ಶಿವಪ್ಪ ತಂದೆ ಡಾಕಪ್ಪ ಅಂತಾ ಗೊತ್ತಾಗಿದ್ದು. ಮರಳನ್ನು ಅಮರೇಶ ತಂದೆ ದುರಗಯ್ಯ ಎನ್ನುವವರು ಶೇಖರಣೆ ಮಾಡಿಟ್ಟಿದ್ದು, ಚಾಸಾ-4 ರವರು ತಿಳಿಸಿದ್ದು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಟೇಪ್ ನಿಂದ ಅಳತೆ ಮಾಡಲಾಗಿ ಮರಳಿನ ಕುಪ್ಪೆ ಪ್ರಮಾಣ ಅಂದಾಜು 800 ಮೆಟ್ರಿಕ್ ಟನ್ ಇತ್ತು, ಅದರ ಅಂದಾಜು ಕಿಮ್ಮತ್ತು ರೂ 3,00,000/- ಮರಳು ಸಂಗ್ರಹಣೆ ಮಾಡಿದ ಪರವಾನಿಗೆ ಬಗ್ಗೆ ವಿಚಾರಣೆ ಮಾಡಲಾಗಿ ಇರುವುದಿಲ್ಲ ಎಂದು ಗೊತ್ತಾಯಿತು. ನಂತರ ಸ್ಥಳದಲ್ಲಿ ಚಾಸಾ-1 ರವರು ತನ್ನ ಮತ್ತು ಚಾಸಾ-2 ಸಮಕ್ಷಮ ಮದ್ಯಾಹ್ನ 2-30 ರಿಂದ 3-30 ರವರೆಗೆ ಸ್ಥಳ ಪಂಚನಾಮೆಯನ್ನು ಮಾಡಿದ್ದು. ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು. ಜಮೀನಿನ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಚಾಸಾ-1 ರವರು ದೂರನ್ನು ಕೊಟ್ಟಿದ್ದು.

ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**17.** ಪ್ರಾಸಾ.5 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಪಂಚರನ್ನು ಚಾಸಾ-1 ರವರು ತಹಶೀಲ್ದಾರ ಮುಖೇನ ಬರಮಾಡಿಕೊಂಡಿರುತ್ತಾರೆ. ಚಾಸಾ-1 ರವರು ಅಲ್ಲಿಂದ ನಾನು ನಮ್ಮ ಸಿಬ್ಬಂದಿ ಮತ್ತು ಪಂಚರು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಎಲ್ಲಿಗಾದರೆ ಹೋಗಬೇಕಾದರೆ ತಹಶೀಲ್ದಾರರ ಆದೇಶವನ್ನು ಪಡೆದುಕೊಂಡು ಹೋಗುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಸಾರ್ವಜನಿಕರು ಯಾರು ಇರಲಿಲ್ಲ. ಆರೋಪಿತನು ಯಾವ ವಾಹನದಿಂದ ಉಸಕನ್ನು ಶೇಖರಣೆ ಮಾಡಿಟ್ಟಿದ್ದ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

**18.** ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ-6 ಬಸವಂತ್ರಾಯ ಎ.ಎಸ್.ಐ ರವರನ್ನು ಪ್ರಾಸಾ-6 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ: 15-05-2024 ರಂದು ಮದ್ಯಾಹ್ನ 2-00 ರಿಂದ ರಾತ್ರಿ 9-00 ಗಂಟೆಯವರೆಗೆ ತಾನು ಠಾಣಾ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ಠಾಣೆಗೆ ಹಾಜರಾಗಿ ಸಂಜೆ 6-30 ಗಂಟೆಗೆ, ಒಂದು ಗಣಕೀಕೃತ ದೂರು ಮತ್ತು ಅಕ್ರಮ ಮರಳು ಪಂಚನಾಮೆ, ಹಾಜರುಪಡಿಸಿದ್ದು. ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ನಂ.150/2024 ರಂತೆ ಭಾರತೀಯ ದಂಡ ಸಂಹಿತೆ ಕಲಂ 379 ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಅದರ ಪ್ರತಿಯನ್ನು ರವಾನಿಸಿದ್ದು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು. ಪಂಚನಾಮೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು. ಅದೇ ದಿನ ಮುದ್ದೆಮಾಲನ್ನು ಜಮಾ ಮಾಡಲು ಮಾನ್ಯ ನ್ಯಾಯಾಲಯಕ್ಕೆ ಪಿ.ಎಫ್ ಸಂಖ್ಯೆ 114/2024 ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರವರ ವಶಕ್ಕೆ ನೀಡಲು ಪರವಾನಿಗೆ ನೀಡಲು ಅನುಮತಿಯನ್ನು ಪಡೆದುಕೊಂಡಿದ್ದು. ಸಾಕ್ಷಿ ಸ್ವತ್ತಿನ ವಿವರ ಪಟ್ಟಿಯನ್ನು ನೋಡಿ ಗುರುತಿಸಿದ್ದು. ನಂತರ ದಿನಾಂಕ: 16-05-2024 ರಂದು ಸಾಕ್ಷಿದಾರರಾದ ಚಾಸಾ-1, 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು. ದಿನಾಂಕ: 17-05-2024 ರಂದು

ಜಪ್ತಿ ಮಾಡಿದ ಮರಳನ್ನು ಜಮಾ ಮಾಡಿ ಕೊಳ್ಳಲು ಮಾನ್ಯ ಹಿರಿಯ ಭೂ ವಿಜ್ಞಾನಿಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರಿಗೆ ಪತ್ರ ಬರೆದಿದ್ದು. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು. ದಿನಾಂಕ: 20-05-2024 ರಂದು ಚಾಸಾ-1 ಮತ್ತು 4 ರವರ ಪುರವಣಿ ಹೇಳಿಕೆಗಳನ್ನು ಪಡೆದುಕೊಂಡಿದ್ದು. ಅದೇ ದಿನ ತಹಶೀಲ್ದಾರ ದೇವದುರ್ಗ ಕಚೇರಿಯಿಂದ ಪಹಣಿ ಪತ್ರಿಕೆ ಪಡೆದುಕೊಂಡಿದ್ದು. ಅದೇ ದಿನ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 41(ಎ) ಪ್ರಕಾರ ನೋಟಿಸನ್ನು ಜಾರಿ ಮಾಡಿದ್ದು. ಸಾಕ್ಷಿದಾರರು ಪೋಲಿಸ್ ನೋಟಿಸ್ ನ್ನು ನೋಡಿ ಗುರುತಿಸಿದ್ದು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು ಇದ್ದು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿದ್ದು. ನಂತರ ಆರೋಪಿ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ದೋಷಾರೋಪಣೆ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**19.** ಪ್ರಾಸಾ.6 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ದೂರುದಾರರು ಒಬ್ಬರೆ ದೂರು ಕೊಡಲು ಬಂದಿರುತ್ತಾರೆ. ದೂರನ್ನು ಪಡೆದುಕೊಂಡ ನಂತರ ನಾನು ಸ್ಥಳಕ್ಕೆ ಪರಿಶೀಲನೆ ಮಾಡಲು ಹೋಗಿಲ್ಲ. ಮರಳು ಅಂದಾಜು 800 ಮೇಟ್ರಿಕ್ ಟನ್ ನಷ್ಟು ಇತ್ತು ಎಂದು ದೂರಿನ ಆಧಾರದ ಮೇರೆಗೆ ನಾನು ಹೇಳುತ್ತಿದ್ದೇನೆ. ನಾನು ಸ್ಥಳಕ್ಕೆ ಹೋಗಿ ಅಳತೆ ಮಾಡಿಲ್ಲ. ಫಿರ್ಯಾದಿ ದೂರು ಕೊಟ್ಟ ಆಧಾರದ ಮೇರೆಗೆ ಮರಳನ್ನು ಪಟ್ಟಾಜಾಗದಲ್ಲಿ ಶೇಖರಣೆ ಮಾಡಿಟ್ಟಿದ್ದಾರೆಂದು ಹೇಳುತ್ತಿದ್ದೇನೆ. ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಂದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. 1 ನೇ ಆರೋಪಿಯ ಹೆಸರಿನಲ್ಲಿ ಜಮೀನಿನ ಪಹಣಿ ಇರುವುದಿಲ್ಲ ಎಂದರೆ ಸರಿ. ಮರಳನ್ನು ಜಮಾ ಮಾಡಿಕೊಳ್ಳಲು ಗಣಿ ಮತ್ತು ಭೂ ವಿಜ್ಞಾನಿಗಳ ಇಲಾಖೆಯವರಲ್ಲಿ ಪತ್ರ ವ್ಯವಹಾರ ಮಾಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಜಪ್ತಿ ಪಡಿಸಿಕೊಂಡ ಮರಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿಯು ನದಿ ದಂಡೆಯ ಹತ್ತಿರ ಸಿಗುರುತ್ತದೆ ಬೇರೆ ಕಡೆ ಸಿಗುವ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ ಎಂದು ನುಡಿದಿರುತ್ತಾರೆ.

**20.** ಮೇಲ್ಕಂಡ ಸಾಕ್ಷಿದಾರರ ಸಾಕ್ಷ್ಯ ಹಾಗೂ ದಾಖಲೆಗಳನ್ನು ಸಂಪೂರ್ಣವಾಗಿ ಗಮನಿಸಿದಾಗ, ಮುಖ್ಯವಾಗಿ ಪ್ರಾಸಾ.1 ರವರು ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ರವರ ಆದೇಶದ ಮೆರೆಗೆ ಚಾಸಾ-1 ಮತ್ತು 2 ರವರು ದೇವದುರ್ಗ ತಾಲೂಕಿನ ವಿವಿಧ ಸ್ಥಳಗಳಲ್ಲಿ ಪರಿಶೀಲನೆ ಮಾಡಲು ಹೋಗಿದ್ದು ಗೋಪಾಲಪುರ ಗ್ರಾಮದ ಸೀಮಾಂತರ ಜಮೀನು ಸರ್ವೆ ನಂಬರ್ 35/2/2 ನೇದ್ದರಲ್ಲಿ ಅಕ್ರಮವಾಗಿ ಮರಳು ಕುಪ್ಪೆ ಕುಪ್ಪೆಯಾಗಿ ಶೇಖರಣೆ ಮಾಡಿಟ್ಟಿದ್ದಾರೆ ಎಂದು ಅವರು ದಾಳಿ ಮಾಡಿದ್ದು, ಈ ಪ್ರಕರಣದ 2 ನೇ ಆರೋಪಿತನು ಜಮೀನಿನ ಮಾಲೀಕನಾಗಿದ್ದು ಅವರು ಮಾನ್ಯ ನಾಯ್ಯಲಯಾದ ಸಮಕ್ಷಮ ತಮ್ಮ ತಪ್ಪೊಪ್ಪಿಗೆಯನ್ನು ಒಪ್ಪಿಕೊಂಡು ನ್ಯಾಯಾಲಯಕ್ಕೆ ದಂಡವನ್ನು ಪಾವತಿಸಿರುತ್ತಾರೆ. ಆದರೆ 1 ನೇ ಆರೋಪಿತನು ಮರಳನ್ನು 2 ನೇ ಆರೋಪಿತನ ಜಮೀನಿನಲ್ಲಿ ಶೇಖರಣೆ ಮಾರಿಟ್ಟಿದ್ದಾನೆ ಎಂದು ಈ ಪ್ರಕರಣದ ಚಾಸಾ-1 ರಿಂದ 5 ರವರು ಕಣ್ಣಾರೆ ನೋಡಿರುವುದಿಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ ಹಾಗೂ ಸಾರ್ವಜನಿಕರಿಂದ ಸದರಿ ಮಾಹಿತಿಯನ್ನು ಪಡೆದುಕೊಂಡಿರುವುದಾಗಿ ತಮ್ಮ ಪಾಟೀಸವಾಲಿನಲ್ಲಿ ತಿಳಿಸಿರುತ್ತಾರೆ. ಆದರೆ ಈ ಕುರಿತು ತನಿಖಾಧಿಕಾರಿಗಳಾದ ಪ್ರಾಸಾ-6 ರವರು ಸ್ಥಳದಲ್ಲಿ ಸಾರ್ವಜನಿಕರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ದಾಳಿ ಮಾಡಿದ ಸಾಕ್ಷಿದಾರರಾದ ಪ್ರಾಸಾ 1 ರಿಂದ 5 ರವರು ಸ್ಥಳದಲ್ಲಿ ಸಾರ್ವಜನಿಕರನ್ನು ವಿಚಾರಣೆಯನ್ನು ಮಾಡಿರುವ ಬಗ್ಗೆ ಯಾವುದೇ ವಿವರವನ್ನು ನೀಡಿರುವುದಿಲ್ಲ, ಸಾರ್ವಜನಿಕರು ಅವರನ್ನು ನೋಡಿ ಸ್ಥಳಕ್ಕೆ ಬಂದಿರುವುದಿಲ್ಲ. ಯಾವ ಸಾರ್ವಜನಿಕರು ವಿಚಾರ ಮಾಡಿರುವುದಿಲ್ಲ ಎಂದು ಅವರ ವಿಚಾರಣೆಯಲ್ಲಿ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

**21.** ಈ ಪ್ರಕರಣದ ಪಂಚ ಸಾಕ್ಷಿದಾರರಾದ ಪ್ರಾಸಾ-4 ಮತ್ತು 5 ರವರು ಅಭಿಯೋಜನೆ ಪ್ರಕರಣಕ್ಕೆ ಹಾಗೂ ದಾಳಿ ಪಂಚನಾಮೆಯ ಬಗ್ಗೆ ಪಾಟೀ ಸವಾಲಿನಲ್ಲಿ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದು, ಮಹಜರ್ ಪ್ರಕಾರ 2 ನೇ ಆರೋಪಿಯು ಗೋಪಾಳಪುರ ಗ್ರಾಮದ ಕೃಷ್ಣಾ ನದಿ ತೀರದಿಂದ ಸುಮಾರು 800 ಮೆಟ್ರಿಕ್ ಟನ್ ನಷ್ಟು ಮರಳನ್ನು ಯಾವುದೇ ಪಾಸು ಮತ್ತು ಪರ್ಮಿಟ್ ಇಲ್ಲದೆ ತಂದು ಅದನ್ನು ಜಮೀನಿನ ಸರ್ವೆ ನಂ.35/2/2 ರಲ್ಲಿ ದಾಸ್ತಾನು ಮಾಡಿದ್ದು,

ವಶಪಡಿಸಿಕೊಂಡಿದ್ದಾರೆಂದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಇದರ ಲಾಭವನ್ನು 2 ನೇ ಆರೋಪಿತನು ಪಡೆಯಲು ಅರ್ಹರಿರುತ್ತಾರೆ.

**22.** ಅಭಿಯೋಜನೆಯ ಪ್ರಕಾರ 2 ನೇ ಆರೋಪಿತನು ಗೋಪಾಳಪುರ ಗ್ರಾಮದ ಕೃಷ್ಣಾ ನದಿ ತೀರದಿಂದ ಸುಮಾರು 800 ಮೆಟ್ರಿಕ್ ಟನ್ ನಷ್ಟು ಮರಳನ್ನು ಯಾವುದೇ ಪಾಸು ಮತ್ತು ಪರ್ಮಿಟ್ ಇಲ್ಲದೆ ತಂದು ಅದನ್ನು ಜಮೀನಿನ ಸರ್ವೆ ನಂ.35/2/2 ರಲ್ಲಿ ದಾಸ್ತಾನು ಮಾಡಿದ್ದು, ಸದರಿ ಜಮೀನಿನ ಸಂಬಂಧ ಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವುದರಿಂದ ಚಾಸಾ-1 ರಿಂದ 05 ರವರು ಸದರಿ ಸ್ಥಳಕ್ಕೆ ದಾಳಿ ಮಾಡಿ ಅಲ್ಲಿ 2 ನೇ ಆರೋಪಿತನು ಮರಳನ್ನುದಾಸ್ತಾನು ಮಾಡಿದ್ದು ಅದನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಸಂಶಯ ಉಂಟಾಗುತ್ತದೆ. ಆದ್ದರಿಂದ ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯು ಈ ಪ್ರಕರಣದಲ್ಲಿ 2 ನೇ ಆರೋಪಿತನು ಭಾ.ದಂ.ಸಂ ಕಲಂ 379 ರ ಅನ್ವಯ ಅಪರಾಧ ಮಾಡಿರುವುದನ್ನು ಸಂಶಯಕ್ಕೆ ಆಸ್ಪದವಿಲ್ಲದಂತೆ ಸಾಭೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ ಎಂದು ಅಂಶ 1 ನ್ನು ನಕಾರತ್ಮಕವಾಗಿ ಉತ್ತರಿಸುತ್ತೇನೆ.

**23.** **ಅಂಶ–2ಃ-** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಆದೇಶ ಹೊರಡಿಸುತ್ತೇನೆ.

## ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ಹಾಗೂ ಬಿ.ಎನ್.ಎಸ್.ಎಸ್ ಕಲಂ 271(1) ರ ಪ್ರದತ್ತವಾದ ಅಧಿಕಾರದ ಅನ್ವಯ 2 ನೇ ಆರೋಪಿತನನ್ನು ಭಾ.ದಂ.ಸಂ ಕಲಂ 379 ಅಪರಾಧಕ್ಕೆ ನಿರ್ದೋಷಿಯೆಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

2 ನೇ ಆರೋಪಿತನ ಮತ್ತು ಅವನ ಜಾಮೀನುದಾರರ ಮುಚ್ಚಳಿಕೆಯನ್ನು ಈ ಮೂಲಕ ರದ್ದುಗೊಳಿಸಿದೆ.

2 ನೇ ಆರೋಪಿತನ ಮತ್ತು ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437 ಎ ರಡಿಯಲ್ಲಿ ಬರೆದು ಕೊಟ್ಟಿರುವ ಮುಚ್ಚಳಿಕೆ ಪತ್ರವು 6 ತಿಂಗಳ ಕಾಲ ಅಸ್ತಿತ್ವದಲ್ಲಿ ಇರುತ್ತದೆ.

ದೋಷಾರೋಪಣಾ ಪತ್ರದೊಂದಿಗೆ ಸ್ವತ್ತು ಪಟ್ಟಿ ಸಂಖ್ಯೆ 114/2024 ರಲ್ಲಿ ದಿ: 15-05-2024 ರಲ್ಲಿ ನಮೂದಿಸಿರುವ 800 ಮೆಟ್ರಿಕ್ ಟನ್ ಇತ್ತು, ಅದರ ಅಂದಾಜು ಕಿಮ್ಮತ್ತು ರೂ.3,12,000/- ಇದನ್ನು ಈಗಗಾಲೇ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ ಒಪ್ಪಿಸಿರುತ್ತಾರೆ.

**(ಈ ಮೇಲಿನ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್‌ನಲ್ಲಿ ಉಕ್ತಲೇಖನ ಕೊಟ್ಟು ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ ಸಹಿ ಮಾಡಿ ದಿನಾಂಕ: 10-06-2026 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)**

ಸಹಿ/-
(ಶ್ರೀ ರಫೀಕ್ ಅಹಮದ್)
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ದೇವದುರ್ಗ.

**: ಅನುಬಂಧ :**

**1. ಅಭಿಯೋಜನೆಯ ಪರ ವಿಚಾರಣೆ ಮಾಡಿಕೊಂಡ ಸಾಕ್ಷಿದಾರರ ವಿವರ:**

ಪ್ರಾಸಾ-1 : ವಿರೇಶ.

ಪ್ರಾಸಾ-2 : ಪುಷ್ಪಲತಾ. ಎಮ್. ಕವಲುರು.

ಪ್ರಾಸಾ-3 : ನಂದಿನಿ.

ಪ್ರಾಸಾ-4 : ಶಿವಪ್ಪ.

ಪ್ರಾಸಾ-5 : ಬೂಮಣ್ಣ.

ಪ್ರಾಸಾ-6 : ಬಸವಂತ್ರಾಯ.

**2. ಅಭಿಯೋಜನೆಯ ಪರ ಗುರುತಿಸಿಕೊಂಡ ದಾಖಲಾತಿಗಳ ವಿವರ:**

ನಿಪಿ-1 : ದೂರು.

ನಿಪಿ-1(ಎ) : ಪ್ರಾಸಾ-2 ರವರ ಸಹಿ.

ನಿಪಿ-1(ಬಿ) : ಪ್ರಾಸಾ-6 ರವರ ಸಹಿ.

ನಿಪಿ-2 : ಪಂಚನಾಮೆ.

ನಿಪಿ-1(ಎ) : ಪ್ರಾಸಾ-2 ರವರ ಸಹಿ.

ನಿಪಿ-1(ಬಿ) : ಪ್ರಾಸಾ-3 ರವರ ಸಹಿ.

ನಿಪಿ-1(ಸಿ) : ಪ್ರಾಸಾ-4 ರವರ ಸಹಿ.

ನಿಪಿ-1(ಡಿ) : ಪ್ರಾಸಾ-5 ರವರ ಸಹಿ.

ನಿಪಿ-3 : ಪ್ರಥಮ ವರ್ತಮಾನ ವರದಿ.

ನಿಪಿ-3(ಎ) : ಪ್ರಾಸಾ-6 ರವರ ಸಹಿ.

ನಿಪಿ-4 : ಸ್ವತ್ತಿನ ಪಟ್ಟಿ.

ನಿಪಿ-4(ಎ) : ಪ್ರಾಸಾ-6 ರವರ ಸಹಿ.

ನಿಪಿ-5 : ದಾಖಲೆ.

ನಿಪಿ-5(ಎ) : ಪ್ರಾಸಾ-6 ರವರ ಸಹಿ.

ನಿಪಿ-6 : ಪಹಣಿ.

ನಿಪಿ-7 : ಪೋಲಿಸ್ ನೋಟಿಸ್.

ನಿಪಿ-7(ಎ) : ಪ್ರಾಸಾ-6 ರವರ ಸಹಿ.

**3. ಆರೋಪಿತರ ಪರ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ :**

ಇಲ್ಲಾ

**4. ಆರೋಪಿತರ ಪರ ಗುರುತಿಸಿಕೊಂಡ ದಾಖಲೆಗಳ ವಿವರ :**

ಇಲ್ಲಾ

**5. ಅಭಿಯೋಜನೆಯ ಪರ ಗುರುತಿಸಿಕೊಂಡ ಮುದ್ದೆ ಮಾಲಿನ ವಿವರ :**

800 ಕ್ಯೂಬಿಕ್ ಮೀಟರ್ ಮರಳು.

ಸಹಿ/-
(ಶ್ರೀ ರಫೀಕ್ ಅಹಮದ್)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ದೇವದುರ್ಗ.